# ASSOCIATED MANAGEMENTS OF PRIMARY & SECONDARY SCHOOLS IN KARNATAKA (Regd.)

**(Govt. Recognised - English Medium)**

Regd Office: Iyer High School, MSR Main Road, Mathikere, Bangalore-560 054

## ಸದಸ್ಯ ಶಾಲೆಗಳಿಗೆ ಸೂಚನೆ

ಕರ್ನಾಟಕ ರತ್ನ **ಡಾ|| ಶ್ರೀ ಶಿವಕುಮಾರ ಸ್ವಾಮಿಗಳು, ತುಮಕೂರು ಜಿಲ್ಲೆಯ ಸಿದ್ಧಗಂಗಾ ಮಠದ ಮಠಾಧಿಪತಿಗಳು ಇವರು ತ್ರಿವಿಧ (ಅನ್ನ, ಅಕ್ಷರ, ಜ್ಞಾನ) ದಾಸೋಹಿ.** 12ನೇ ಶತಮಾನದ ಯುಗಪುರುಷ, ಕ್ರಾಂತಿಕಾರಿ ಬಸವಣ್ಣನವರ ಕಾಯಕವೇ ಕೈಲಾಸ ಮತ್ತು ನಿತ್ಯ ದಾಸೋಹ ತತ್ವದ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ಯಾವುದೇ ಒಂದು ಧರ್ಮಕ್ಕೆ ಸೀಮಿತವಾಗದೆ ಎಲ್ಲಾ ಧರ್ಮಗಳ ಮತ್ತು ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿರುವ ದೇಶ ಕಂಡ ಅಪರೂಪದ ರತ್ನವೇ ಸರಿ. ಇತ್ತೀಚಿನ ದಿನಗಳಲ್ಲಿ ಸ್ವಾಮೀಜಿಗಳು ಅನಾರೋಗ್ಯದಿಂದ ಬಳಲುತ್ತಿದ್ದರೂ ಕೂಡ, ದೇವರ ಪೂಜೆ-ಪುರಸ್ಕಾರಗಳಲ್ಲಿ ಸದಾ ತಮ್ಮನ್ನು ತಾವು ತೊಡಗಿಸಿಕೊಂಡು, ಭಕ್ತರ ಯೋಗಕ್ಷೇಮ ವಿಚಾರಿಸುವಂತಹ ಉದಾರ ಮನಸ್ಸಿನ ದಾಸೋಹಿ. ಇದೀಗ ಕೆಲ ದಿನಗಳಿಂದ ಆರೋಗ್ಯದ ಏರುಪೇರು ಆಗಿದ್ದು, ಇವರ ಆರೋಗ್ಯ ಸುಧಾರಣೆ ಆಗಲಿ, ಬೇಗ ಚೇತರಿಕೆ ಕಾಣಲಿ ಎಂದು ಎಲ್ಲಾ ಶಿಕ್ಷಣ ಸಂಸ್ಥೆಗಳ ಪ್ರಾರ್ಥನೆಯಾಗಬೇಕೆಂದು ಸಂಘಟನೆ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಾ, ಈ ಕೆಳಗಿನ ಸೂಚನೆಗಳನ್ನು ಶಿಫಾರಸ್ಸು ಮಾಡಲಾಗಿದೆ.

1. ತಮ್ಮ ಶಾಲೆಯಲ್ಲಿರುವಂತಹ ಎಲ್ಲಾ ಮಕ್ಕಳಿಗೆ ಡಾ|| ಶ್ರೀ ಶಿವಕುಮಾರಸ್ವಾಮಿಗಳ ಕುರಿತಂತೆ ಅವರ ಫೋಟೋ ತೋರಿಸುವ ಮುಖಾಂತರ ಸ್ವಾಮೀಜಿಗಳ ಸೇವೆಗಳನ್ನು ಪರಿಚಯಿಸುವುದು.
2. ಡಾ|| ಶ್ರೀ ಶಿವಕುಮಾರಸ್ವಾಮಿಗಳ ಸಾಕ್ಷ್ಯಚಿತ್ರಗಳನ್ನು ತೋರಿಸುವ ಮುಖಾಂತರ ಅವರನ್ನು ಹೆಚ್ಚು ಪರಿಚಯಿಸುವುದು.
3. ವಿದ್ಯಾರ್ಥಿಗಳಲ್ಲಿ ಸಿದ್ಧಗಂಗಾ ಶಿಕ್ಷಣ ಸಂಸ್ಥೆಯ, ವಿದ್ಯಾರ್ಥಿಗಳ ಕಲಿಕೆ ಹಾಗೂ ಜೀವನಶೈಲಿಯ ಬಗ್ಗೆ ಪರಿಚಯಿಸುವುದು.
4. ಕರ್ನಾಟಕ ರತ್ನ ಡಾ|| ಶ್ರೀ ಶಿವಕುಮಾರಸ್ವಾಮಿಗಳಿಗೆ ದೊರಕಿದಂತಹ ಪ್ರಶಸ್ತಿಗಳು/ಬಿರುದುಗಳ ಬಗ್ಗೆ ಹೆಚ್ಚು ಬೆಳಕು ಚೆಲ್ಲುವುದು.

ಈ ರೀತಿಯಲ್ಲಿ ಪ್ರತಿಯೊಂದು ಸದಸ್ಯ ಶಾಲೆಗಳು ತಮ್ಮ ವಿವೇಚನೆಗೆ ಪೂರಕವಾಗಿ ಒಟ್ಟಾರೆ ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಮಹಾಸ್ವಾಮಿಗಳ ಮೌಲ್ಯಾಧಾರಿತ ಬದುಕನ್ನು ಹೆಚ್ಚು ಪರಿಚಯಿಸಿ, ಅವರನ್ನು ನಡೆದಾಡುವ ದೇವರು ಎಂಬ ಹೆಸರುವಾಸಿಗೆ ಅರ್ಥಪೂರಕವಾಗಿ ವಿದ್ಯಾರ್ಥಿಗಳಿಗೆ ಮನದಟ್ಟಾಗುವ ರೀತಿಯಲ್ಲಿ ಶಿಕ್ಷಕರು ಹಾಗೂ ಶಾಲೆಯ ಮುಖ್ಯಸ್ಥರು ತಮ್ಮ ಪಾತ್ರಗಳನ್ನು ವಹಿಸಿ, ಇಂತಹ ದೈವ ಮಾನವನಿಗೆ ನಮ್ಮ ಭಕ್ತಿಪೂರಕ ನಮನ ಸಲ್ಲಿಸುವ ಹಾಗೂ ಅವರ ಆರೋಗ್ಯ ಸುಧಾರಣೆಗೆ ಎಲ್ಲಾ ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಬೇಕಾಗಿ ಸಂಘಟನೆ ಅಭಿಪ್ರಾಯ ವ್ಯಕ್ತಪಡಿಸುತ್ತಿದೆ.

**ಕ್ಯಾಮ್ಸ್ ಸಂಘಟನೆ, ಡಾ|| ಶ್ರೀ ಶಿವಕುಮಾರ ಸ್ವಾಮೀಜಿಗಳಿಗೆ ಕೇಂದ್ರ ಸರ್ಕಾರ "ಭಾರತರತ್ನ" ಬಿರುದನ್ನು ನೀಡಿ ಗೌರವಿಸಬೇಕೆಂಬುದು** ನಮ್ಮ ಅಪೇಕ್ಷೆ ಕೂಡ ಆಗಿದೆ. (ಶಾಲಾ ಮಕ್ಕಳಿಗೆ ಸ್ವಾಮೀಜಿ ಬಗ್ಗೆ ತಿಳುವಳಿಕೆ ನೀಡಿ, ಮಕ್ಕಳೇ ಸ್ವಯಂ ಪ್ರೇರಿತರಾಗಿ ಭಾರತರತ್ನ ಬಿರುದು ನೀಡಲು, ಗೌರವ ಪ್ರಧಾನ ಮಂತ್ರಿಗಳಿಗೆ, ಮಕ್ಕಳಿಂದ ಪತ್ರ ಬರೆಯಿಸುವಂತಹ ಪ್ರೋತ್ಸಾಹ ಮಾಡಬಹುದಾಗಿದೆ). ನಡೆದಾಡುವ ದೇವರು ಬೇಗ ಗುಣಮುಖರಾಗಲೆಂದು ಪ್ರಾರ್ಥಿಸುತ್ತಾ, ರಾಜ್ಯಾದ್ಯಂತ ಶಿಕ್ಷಣ ಸಂಸ್ಥೆಗಳು ತಮ್ಮ ತಮ್ಮ ಶಾಲೆಗಳಲ್ಲಿ ತಕ್ಷಣ ಪ್ರಾರ್ಥನೆ ಸಲ್ಲಿಸುತ್ತೀರೆಂಬ ನಂಬಿಕೆಯೊಂದಿಗೆ, ಮನವಿಸಲಾಗಿದೆ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ,

19/1/19

**(ಡಿ.ಶಶಿಕುಮಾರ್)**
ಪ್ರಧಾನ ಕಾರ್ಯದರ್ಶಿ

Correspond Office : Blossoms School Office Building, 29th Cross, Bagalgunte, Bangalore - 560 073, Ph : 080-28371264,
Mob : 9886497910, E-mail : braincenter73@gmail.com Website : www.kamskarnataka.com WEB TV : blossomstv.com

Scanned by CamScanner